## ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 2656 |
| ಸದಸ್ಯರ ಹೆಸರು | : | ಶ್ರೀ ಎಸ್.ರವಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) |
| ಉತ್ತರಿಸುವ ದಿನಾಂಕ | : | 25-03-2022 |
| ಉತ್ತರಿಸುವವರು | : | ಮಾನ್ಯ ರೇಷ್ಮೆ ಹಾಗೂ ಯುವ ಸಬಲೀಕರಣ ಮತ್ತು ಕ್ರೀಡಾಸಚಿವರು |

| | ಪ್ರಶ್ನೆಗಳು | ಉತ್ತರಗಳು |
|---|---|---|
| ಅ | ಬೆಂಗಳೂರು ಗ್ರಾಮಾಂತರ ಜಿಲ್ಲೆಯ ದೇವನಹಳ್ಳಿ ತಾಲ್ಲೂಕಿನ ಕೊಯಿರ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಸುತ್ತಮುತ್ತ ರೈತರು ಬೆಳೆದಿರುವ ರೇಷ್ಮೆ ಬೆಳೆಗಳಿಗೆ ಗಣಿ ಧೂಳು ಆವರಿಸಿ ರೇಷ್ಮೆ ಬೆಳೆಗಾರರು ಅನುಭವಿಸುತ್ತಿರುವ ತೊಂದರೆಗಳ ಬಗ್ಗೆ ಸರ್ಕಾರದ ಗಮನಕ್ಕೆ ಬಂದಿದೆಯೇ: ಬಂದಿದ್ದಲ್ಲಿ, ಈ ಭಾಗದಲ್ಲಿ ಎಷ್ಟು ವಿಸ್ತೀರ್ಣದ ಬೆಳೆ ಗಣಿ ಧೂಳಿನಿಂದ ನಷ್ಟವಾಗುತ್ತಿದೆ: ಇದರ ಫಲಾನುಭವಿಗಳು ಯಾರು; ನಷ್ಟದ ಪ್ರಮಾಣವೆಷ್ಟು; ಆಗಿರುವ ನಷ್ಟಗಳಿಗೆ ಪರಿಹಾರ ನೀಡಲಾಗಿದೆಯೇ; (ಸಂಪೂರ್ಣ ವಿವರ ನೀಡುವುದು) | ಬೆಂಗಳೂರು ಗ್ರಾಮಾಂತರ ಜಿಲ್ಲೆಯ ದೇವನಹಳ್ಳಿ ತಾಲ್ಲೂಕಿನ ಕೊಯಿರ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಸುತ್ತಮುತ್ತ ರೈತರು ಬೆಳೆದಿರುವ ರೇಷ್ಮೆ ಬೆಳೆಗಳಿಗೆ ಗಣಿ ಧೂಳು ಆವರಿಸಿ ರೇಷ್ಮೆ ಬೆಳೆಗಾರರು ಅನುಭವಿಸುತ್ತಿರುವ ತೊಂದರೆಗಳ ಬಗ್ಗೆ ಸರ್ಕಾರದ ಗಮನಕ್ಕೆ ಬಂದಿರುತ್ತದೆ.<br>ದೇವನಹಳ್ಳಿ ತಾಲ್ಲೂಕು ವ್ಯಾಪ್ತಿಯ 6 ಸುತ್ತಮುತ್ತಲಿನ ಹಳ್ಳಿಗಳ 37 ರೇಷ್ಮೆ ಬೆಳೆಗಾರರಿಗೆ ಸಂಬಂಧಿಸಿದ 44.35 ಎಕರೆ ಪ್ರದೇಶದ ಹಿಪ್ಪುನೇರಳೆ ತೋಟಗಳ ವಿಸ್ತೀರ್ಣವು ಗಣಿ/ಕ್ರಷರ್ ಧೂಳಿನಿಂದ ಹಾನಿಯಾಗಿದೆ. ಇದರಿಂದ ರೂ.26,39,800/- ಗಳಷ್ಟು ಬೆಳೆ ನಷ್ಟ ಉಂಟಾಗಿರುತ್ತದೆ. ಈ ರೇಷ್ಮೆ ಬೆಳೆಗಾರರು ಚಿಕ್ಕಗೊಲ್ಲಹಳ್ಳಿ, ಮುದ್ದನಾಯಕನಹಳ್ಳಿ, ಬಿದಲೂರು, ಕೊಯಿರಾ, ಮಾಯಸಂದ್ರ, ತೈಲಗೆರೆ ಹಾಗೂ ಕೆ.ಹೊಸೂರು ಗ್ರಾಮಕ್ಕೆ ಸೇರಿದ್ದು ವಿವರಗಳನ್ನು ಅನುಬಂಧದಲ್ಲಿ ಇರಿಸಿದೆ. |
| ಆ | ಈ ಭಾಗದ ರೇಷ್ಮೆ ಇಲಾಖೆಯ ಅಧಿಕಾರಿಗಳು ಗಣಿ ಧೂಳಿನಿಂದ ರೈತರಿಗೆ ಆಗುತ್ತಿರುವ ಬೆಳೆ ನಷ್ಟಗಳ ಬಗ್ಗೆ ವರದಿ ನೀಡಿದ್ದರೂ, ಈ ಸಂಬಂಧ ಯಾವುದೇ ಕ್ರಮ ಕೈಗೊಳ್ಳದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ಈ ರೈತರ ಸಮಸ್ಯೆಗಳನ್ನು ಪರಿಹರಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು? (ವಿವರ ನೀಡುವುದು) | ಬೆಂಗಳೂರು ಗ್ರಾಮಾಂತರ ಜಿಲ್ಲೆಯ ದೇವನಹಳ್ಳಿ ತಾಲ್ಲೂಕಿನ ಕೊಯಿರಾ ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ ಮಂಜೂರಾಗಿರುವ ಕಟ್ಟಡ ಕಲ್ಲುಗಣಿ ಗುತ್ತಿಗೆಗಳು, ಕ್ರಷರ್ ಘಟಕಗಳು ಹಾಗೂ ಅಲಂಕಾರಿಕ ಶಿಲೆ ಕಲ್ಲುಗಣಿ ಗುತ್ತಿಗೆಗಳ ಪ್ರದೇಶಗಳಿಗೆ ತಾಂತ್ರಿಕ ಅಧಿಕಾರಿಗಳು ಆಗಿಂದಾಗ್ಗೆ ಸ್ಥಳ ಪರಿಶೀಲನೆ ನಡೆಸಿ ಗುತ್ತಿಗೆದಾರರು ತಮ್ಮ ಗುತ್ತಿಗೆ ಪ್ರದೇಶಗಳಲ್ಲಿ ಸರ್ಕಾರದಿಂದ ವಿಧಿಲಾಗಿರುವ ಷರತ್ತುಗಳಿಗನುಗುಣವಾಗಿ ಗಣಿಗಾರಿಕೆ ಚಟುವಟಿಕೆಗಳನ್ನು ನಡೆಸುತ್ತಿರುವ ಬಗ್ಗೆ ಮತ್ತು ನ್ಯೂನ್ಯತೆಗಳ ಬಗ್ಗೆ ವರದಿಯನ್ನು ನೀಡಿರುತ್ತಾರೆ. ಅದರಂತೆ ಗುತ್ತಿಗೆದಾರರು ತಮ್ಮ ಕಲ್ಲುಗಣಿ ಗುತ್ತಿಗೆ ಪ್ರದೇಶಗಳಲ್ಲಿನ ಗಣಿಗಾರಿಕೆ ಚಟುವಟಿಕೆಗಳಿಂದ ಸಾರ್ವಜನಿಕರಿಗೆ ಹಾಗೂ ಕೃಷಿ ಭೂಮಿಗೆ ಉಂಟಾಗುತ್ತಿರುವ ಧೂಳಿನ ತೊಂದರೆ ಬಗ್ಗೆ ಸೂಕ್ತ ಕ್ರಮವಹಿಸುವಂತೆ ಸೂಚಿಸಿ ಈಗಾಗಲೇ ನೋಟೀಸ್‌ಗಳನ್ನು ಜಾರಿಗೊಳಿಸಲಾಗಿರುತ್ತದೆ. |

| | | |
|---|---|---|
| | | ಬೆಂಗಳೂರು ಗ್ರಾಮಾಂತರ ಜಿಲ್ಲೆಯ ದೇವನಹಳ್ಳಿ ತಾಲ್ಲೂಕು ವ್ಯಾಪ್ತಿಯಲ್ಲಿ ಮಂಜೂರು ಮಾಡಿರುವ ಕಲ್ಲುಗಣಿ ಗುತ್ತಿಗೆ ಪ್ರದೇಶಗಳಲ್ಲಿ ಗುತ್ತಿಗೆದಾರರು ಕೃಷಿ ಜಮೀನುಗಳಿಗೆ ಧೂಳು ಹೋಗದಂತೆ ಹಾಗೂ ಜನ-ಜಾನುವಾರುಗಳಿಗೆ ತೊಂದರೆಯಾಗದಂತೆ ಕಲ್ಲುಗಣಿ ಗುತ್ತಿಗೆ ಪ್ರದೇಶಗಳ ವಿಸ್ತೀರ್ಣದ ಸುತ್ತಲೂ ಸಂಪೂರ್ಣ ಪ್ರಮಾಣದಲ್ಲಿ ಜಂಕ್ ಶೀಟ್‌ಗಳಿಂದ ತಡೆಗೋಡೆಗಳನ್ನು ನಿರ್ಮಿಸಿಕೊಂಡಿರುತ್ತಾರೆ.<br>ಕ್ರಷರ್ ಘಟಕಗಳ ಸುರಕ್ಷಿತ ವಲಯದಿಂದ ಕೃಷಿ ಜಮೀನುಗಳಿಗೆ ಧೂಳು ಹೊರಹೋಗದಂತೆ ಸುತ್ತ-ಮುತ್ತಲೂ ಜಂಕ್‌ಶೀಟ್‌ಗಳ ಮೂಲಕ ತಡೆಗೋಡೆಗಳನ್ನು ನಿರ್ಮಿಸಿಕೊಂಡಿರುತ್ತಾರೆ ಮತ್ತು ಸುತ್ತಲೂ ಗಿಡ ಮತ್ತು ಮರಗಳನ್ನು ಬೆಳೆಸಿರುತ್ತಾರೆ.<br>ಗುತ್ತಿಗೆದಾರರು ಕಲ್ಲುಗಣಿ ಗುತ್ತಿಗೆ ಪ್ರದೇಶಗಳಿಂದ ಹಾಗೂ ಕ್ರಷರ್ ಘಟಕಗಳಿಂದ ಉಪಖನಿಜವನ್ನು (ಜೆಲ್ಲಿ, ಎಂ-ಸ್ಯಾಂಡ್) ಸಾಗಾಟ ಮಾಡುವ ಸಮಯದಲ್ಲಿ ವಾಹನಗಳಿಂದ ಹೊರಹೊಮ್ಮುವ ಧೂಳನ್ನು ನಿಯಂತ್ರಿಸಲು ರಸ್ತೆಗಳಿಗೆ ಟ್ಯಾಂಕರ್ ಮೂಲಕ ಆಗಿಂದಾಗ್ಗೆ ನೀರನ್ನು ಸಿಂಪಡಿಸುತ್ತಿರುತ್ತಾರೆ. ಸ್ಪ್ರಿಂಕ್ಲರ್ ವಿಧಾನವನ್ನು ಅಳವಡಿಸಿಕೊಂಡಿದ್ದು, ಇದರಿಂದ ಕ್ರಷರ್ ಘಟಕಗಳಿಂದ ಹೊರ ಹೊಮ್ಮುವ ದೂಳು ಕೃಷಿ ಜಮೀನುಗಳಿಗೆ ಬಾರದಂತೆ ನಿಯಂತ್ರಣ ಮಾಡಿಕೊಂಡಿರುತ್ತಾರೆ.<br>ಮುಂದುವರೆದು, ಜಿಲ್ಲಾ ವಿಪತ್ತು ನಿರ್ವಹಣಾ ಪ್ರಾಧಿಕಾರ, ಗಣಿ ಮತ್ತು ಭೂವಿಜ್ಞಾನ ಇಲಾಖೆ, ಪರಿಸರ, ಕೃಷಿ, ತೋಟಗಾರಿಕೆ ಬೆಂಗಳೂರು ಗ್ರಾಮಾಂತರ ಜಿಲ್ಲೆ ರವರಿಂದ ದಿನಾಂಕ:24.09.2021 ರಂದು ಬೆಂಗಳೂರು ಗ್ರಾಮಾಂತರ ಜಿಲ್ಲೆ ದೇವನಹಳ್ಳಿ ತಾಲ್ಲೂಕು ವ್ಯಾಪ್ತಿಯಲ್ಲಿನ ಕ್ರಷರ್ ಘಟಕಗಳ ಮಾಲೀಕರುಗಳಿಗೆ ಮತ್ತು ಕಾರ್ಮಿಕರಿಗೆ ಆರೋಗ್ಯ ತಪಾಸಣಾ ಶಿಬಿರ ಮತ್ತು ಜಾಗೃತಿ ಕಾರ್ಯಾಗಾರ ಏರ್ಪಡಿಸಿದ್ದು, ಸದರಿ ಕಾರ್ಯಾಗಾರದಲ್ಲಿ ಕ್ರಷರ್ ನಿರ್ವಹಣೆಯಿಂದ ಸಾರ್ವಜನಿಕರಿಗೆ ಯಾವುದೇ ತೊಂದರೆಯಾಗದಂತೆ, ಯಾವ ರೀತಿ ಕ್ರಷರ್ ಘಟಕಗಳಲ್ಲಿ ಕಾರ್ಯ ನಿರ್ವಹಿಸಬಹುದು ಮತ್ತು ಕಾರ್ಮಿಕರು ಯಾವ ರೀತಿ ಆರೋಗ್ಯವನ್ನು ಕಾಪಾಡಿಕೊಳ್ಳಲು ಕ್ರಮ ವಹಿಸಬಹುದು ಎಂಬುದರ ಬಗ್ಗೆ ಕಾರ್ಯಾಗಾರದಲ್ಲಿ ಅರಿವನ್ನು ಮೂಡಿಸಲು ಕ್ರಮವಹಿಸಲಾಗಿರುತ್ತದೆ. |

ರೇಷ್ಮೆ 72 ರೇಕೃವಿ 2022

(ಡಾ. ನಾರಾಯಣಗೌಡ)
ರೇಷ್ಮೆ, ಯುವ ಸಬಲೀಕರಣ ಮತ್ತು
ಕ್ರೀಡಾ ಸಚಿವರು

# ವಿಧಾನ ಪರಿಷತ್ ಚುಕ್ಕೆ ರಹಿತ ಪ್ರಶ್ನೆ ಸಂಖ್ಯೆ: 2656ರ ಅನುಬಂಧ

| ಕ್ರ ಸಂ | ರೇಷ್ಮೆ ಬೆಳೆಗಾರರ ಹೆಸರು | ತಂದೆ/ ಗಂಡನ ಹೆಸರು | ಗ್ರಾಮ | ದಾಖಲೆ ಗ್ರಾಮ & ಸರ್ವೇ ನಂ | ಹಿಪ್ಪುನೇರಳೆ ವಿಸ್ತೀರ್ಣ (ಎಕರೆಗಳಲ್ಲಿ) | ಸಾಕಾಣಿ ಮಾಡುವ ಮೊಟ್ಟೆಗಳು (ಪ್ರತಿ ಬೆಳೆಗೆ) | ಪಡೆಯುತ್ತಿರುವ ಅಂದಾಜು ಇಳುವರಿ | ದೂಳಿನಿಂದ ಹಾನಿಯಾದ ಬೆಳೆಗಳ ಸಂಖ್ಯೆ | ಅಂದಾಜು ಹಾನಿಯಾಗು ಮೊತ್ತ |
|---|---|---|---|---|---|---|---|---|---|
| 1 | ಎಚ್ ಸುಬ್ರಮಣಿ | ಹನುಮಂತರಾಯಪ್ಪ | ಚಿಕ್ಕಗೊಲ್ಲಹಳ್ಳಿ | ಚಿಕ್ಕಗೊಲ್ಲಹಳ್ಳಿ 39/5 | 1.11 | 200 | 70 | 2 | 98000 |
| 2 | ದೊಡ್ಡಕೆಂಪಣ್ಣ | ಮೋಟಪ್ಪ | ಚಿಕ್ಕಗೊಲ್ಲಹಳ್ಳಿ | ಚಿಕ್ಕಗೊಲ್ಲಹಳ್ಳಿ 29/3 | 1.27 | 200 | 70 | 2 | 98000 |
| 3 | ಚಿಕ್ಕಕೆಂಪಣ್ಣ | ಮೋಟಪ್ಪ | ಚಿಕ್ಕಗೊಲ್ಲಹಳ್ಳಿ | ಮುದ್ದನಾಯಕನಹಳ್ಳಿ 97/1 | 2.00 | 200 | 70 | 2 | 98000 |
| 4 | ಕೆ. ನಾಗರಾಜ | ಕೆಂಪಣ್ಣ | ಚಿಕ್ಕಗೊಲ್ಲಹಳ್ಳಿ | ಚಿಕ್ಕಗೊಲ್ಲಹಳ್ಳಿ 40/5 | 0.28 | 100 | 70 | 2 | 49000 |
| 5 | ಕೆ ರಮೇಶ | ಕೆಂಪಣ್ಣ | ಚಿಕ್ಕಗೊಲ್ಲಹಳ್ಳಿ | ಚಿಕ್ಕಗೊಲ್ಲಹಳ್ಳಿ 74/2, 74/3, 74/5, | 1.09 | 200 | 70 | 2 | 98000 |
| 6 | ಲಕ್ಷ್ಮಮ್ಮ | ಮುನಿಆಂಜಿನಪ್ಪ | ಚಿಕ್ಕಗೊಲ್ಲಹಳ್ಳಿ | ಚಿಕ್ಕಗೊಲ್ಲಹಳ್ಳಿ 23/2, 23/14 | 0.28 | 100 | 70 | 2 | 49000 |
| 7 | ಮುನಿಆಂಜಿನಪ್ಪ | ಚಿಕ್ಕಮುನಿಬಯ್ಯ | ಚಿಕ್ಕಗೊಲ್ಲಹಳ್ಳಿ | ಚಿಕ್ಕಗೊಲ್ಲಹಳ್ಳಿ 23/6 23/1 | 0.21 | 100 | 70 | 2 | 49000 |
| 8 | ನರಸಿಂಹಯ್ಯ (ದಾಖಲೆ ಮಾರಪ್ಪ) | ಮಾರಪ್ಪ | ಚಿಕ್ಕಗೊಲ್ಲಹಳ್ಳಿ | ಚಿಕ್ಕಗೊಲ್ಲಹಳ್ಳಿ 20/2 | 1.00 | 200 | 70 | 2 | 98000 |
| 9 | ಕೆಂಪಣ್ಣ | ತಮ್ಮಣ್ಣಪ್ಪ | ಚಿಕ್ಕಗೊಲ್ಲಹಳ್ಳಿ | ಮಾಯಸಂದ್ರ 62/1 | 0.26 | 100 | 70 | 2 | 49000 |
| 10 | ನಂಜಪ್ಪ | ಹನುಮಂತರಾಯಪ್ಪ | ಚಿಕ್ಕಗೊಲ್ಲಹಳ್ಳಿ | ಮಾಯಸಂದ್ರ 43 ಚಿಕ್ಕಗೊಲ್ಲಹಳ್ಳಿ 103, 51 | 3.00 | 200 | 70 | 2 | 98000 |
| 11 | ಜಯರಾಮಯ್ಯ | ಮುನಿಸೊಣ್ಣಪ್ಪ | ಚಿಕ್ಕಗೊಲ್ಲಹಳ್ಳಿ | ಚಿಕ್ಕಗೊಲ್ಲಹಳ್ಳಿ 26 | 0.20 | ಸೊಪ್ಪು ಮಾರಾಟ | 70 | 2 | 20000 |
| 12 | ಮರೇಗೌಡ | ತಮ್ಮಣ್ಣಪ್ಪ | ಚಿಕ್ಕಗೊಲ್ಲಹಳ್ಳಿ | ಮಾಯಸಂದ್ರ 42 ಚಿಕ್ಕಗೊಲ್ಲಹಳ್ಳಿ 39/8 | 0.34 | ಸೊಪ್ಪು ಮಾರಾಟ | 70 | 2 | 30000 |
| 13 | ಶೈಲಜ | ರಮೇಶ | ಚಿಕ್ಕಗೊಲ್ಲಹಳ್ಳಿ | ಮಾಯಸಂದ್ರ 38 | 1.00 | 150 | 70 | 2 | 73500 |
| 14 | ಮುನಿಆಂಜಿನಪ್ಪ | ನಂಜಪ್ಪ | ಚಿಕ್ಕಗೊಲ್ಲಹಳ್ಳಿ | ಮುದ್ದನಾಯಕನಹಳ್ಳಿ 85/1 | 2.00 | ಸೊಪ್ಪು ಮಾರಾಟ | 70 | 2 | 45000 |
| 15 | ಮುನಿನಂಜಪ್ಪ | ಮುನಿಯಪ್ಪ | ಚಿಕ್ಕಗೊಲ್ಲಹಳ್ಳಿ | ಚಿಕ್ಕಗೊಲ್ಲಹಳ್ಳಿ 51 | 1.00 | 150 | 70 | 2 | 73500 |
| 16 | ಕೆಂಪಣ್ಣ | ಮೋಟಪ್ಪ | ಚಿಕ್ಕಗೊಲ್ಲಹಳ್ಳಿ | ಮಾಯಸಂದ್ರ 54/1 | 0.20 | ಸೊಪ್ಪು ಮಾರಾಟ | 70 | 2 | 20000 |
| 17 | ರಮೇಶ (ದಾಖಲೆ ಮುನಿಸೊಣ್ಣಪ್ಪ) | ಮುನಿಸೊಣ್ಣಪ್ಪ | ಕೆ ಹೋಸೂರು | ಮಾಯಸಂದ್ರ 40 | 1.00 | 150 | 70 | 2 | 73500 |
| 18 | ಮರಿಯಮ್ಮ | ದೊಡ್ಡಬಚ್ಚಪ್ಪ | ಮಾಯಸಂದ್ರ | ಮಾಯಸಂದ್ರ 25/1 | 1.00 | 150 | 70 | 2 | 73500 |

| | | | | | | | | | |
|---|---|---|---|---|---|---|---|---|---|
| 19 | ನರಸಿಂಹಯ್ಯ | ಚಿಕ್ಕಕದಿರಪ್ಪ | ಮಾಯಸಂದ್ರ | ಮೀಸಗಾನಹಳ್ಳಿ 72/14 | 1.00 | 150 | 70 | 2 | 73500 |
| 20 | ಚಿಕ್ಕಕದಿರಪ್ಪ | ದಾಸಪ್ಪ | ಮಾಯಸಂದ್ರ | ಮೀಸಗಾನಹಳ್ಳಿ 72/12 | 0.22 | 100 | 70 | 2 | 49800 |
| 21 | ಮೂರ್ತಿ | ಕೆಂಪಣ್ಣ | ಮಾಯಸಂದ್ರ | ಮಾಯಸಂದ್ರ 54/2 | 0.25 | 100 | 70 | 2 | 49800 |
| 22 | ನರಸಿಂಹಪ್ಪ | ಮುನಿಶಾಮಪ್ಪ | ಮಾಯಸಂದ್ರ | ಮಾಯಸಂದ್ರ 45 | 1.00 | 150 | 70 | 2 | 73500 |
| 23 | ಕೆಂಪಣ್ಣ | ಮೋಟಪ್ಪ | ಮಾಯಸಂದ್ರ | ಮಾಯಸಂದ್ರ 54/1 | 0.20 | ಸೊಪ್ಪು ಮಾರಾಟ | 70 | 2 | 20000 |
| 24 | ಬಚ್ಚಮ್ಮ (ದಾಖಲೆ ಮುನಿಬಚ್ಚಪ್ಪ) | ಮುನಿಬಚ್ಚಪ್ಪ | ಮಾಯಸಂದ್ರ | ಮಾಯಸಂದ್ರ 1/4 | 0.20 | 100 | 70 | 2 | 49800 |
| 25 | ಆಜಮ್ಮ | ಚಿಕ್ಕಮುನಿಯಪ್ಪ | ಕೊಯಿರಾ | ಮೀಸಗಾನಹಳ್ಳಿ 108 | 3.34 | 350 | 70 | 2 | 392000 |
| 26 | ಮುನಿಮಾರಪ್ಪ | ಒಬಳಪ್ಪ | ಬಿದಲೂರು | ಮುದ್ದನಾಯಕನಹಳ್ಳಿ 167/ಬಿ23 | 1.00 | 150 | 70 | 2 | 73500 |
| 27 | ಚಂದ್ರಶೇಖರ್ | ಗಂಗಪ್ಪ | ಮುದ್ದನಾಯಕನಹಳ್ಳಿ | ಬಿದಲೂರು 235 | 1.00 | 150 | 70 | 2 | 73500 |
| 28 | ನಂಜುಂಡಪ್ಪ (ದಾಖಲೆ ಪಿಳ್ಳಪ್ಪ) | ಲೇಟ್ ಪಿಳ್ಳಪ್ಪ | ಮುದ್ದನಾಯಕನಹಳ್ಳಿ | ಮುದ್ದನಾಯಕನಹಳ್ಳಿ 3/1 | 1.00 | 150 | 70 | 2 | 73500 |
| 29 | ಚನ್ನಪ್ಪ (ದಾಖಲೆ ಪಿಳ್ಳಪ್ಪ) | ಲೇಟ್ ಪಿಳ್ಳಪ್ಪ | ಮುದ್ದನಾಯಕನಹಳ್ಳಿ | ಮುದ್ದನಾಯಕನಹಳ್ಳಿ 3/1 | 1.00 | 150 | 70 | 2 | 73500 |
| 30 | ಮುನೇಗೌಡ (ದಾಖಲೆ ಪಿಳ್ಳಪ್ಪ) | ಲೇಟ್ ಪಿಳ್ಳಪ್ಪ | ಮುದ್ದನಾಯಕನಹಳ್ಳಿ | ಮುದ್ದನಾಯಕನಹಳ್ಳಿ 3/1 | 1.00 | 150 | 70 | 2 | 73500 |
| 31 | ಕೆ ಆಂಜಿನಪ್ಪ | ಕೃಷ್ಣಪ್ಪ | ಮುದ್ದನಾಯಕನಹಳ್ಳಿ | ಮುದ್ದನಾಯಕನಹಳ್ಳಿ 112/ಪಿ25 | 1.00 | 150 | 70 | 2 | 73500 |
| 32 | ಮುನಿರಾಜು | ವೆಂಕಟಪ್ಪ | ಮುದ್ದನಾಯಕನಹಳ್ಳಿ | ಮುದ್ದನಾಯಕನಹಳ್ಳಿ 112/ಪಿ24 | 0.30 | 100 | 70 | 2 | 49800 |
| 33 | ವಿನುತ್‌ಕುಮಾರ್ | ಬೈರಪ್ಪ | ಮುದ್ದನಾಯಕನಹಳ್ಳಿ | ಬಿದಲೂರು 189/3 | 1.00 | ಸೊಪ್ಪು ಮಾರಾಟ | 70 | 2 | 25000 |
| 34 | ರಮೇಶ | ಗಂಗಪ್ಪ | ಮುದ್ದನಾಯಕನಹಳ್ಳಿ | ಮುದ್ದನಾಯಕನಹಳ್ಳಿ 6/3 | 1.00 | ಸೊಪ್ಪು ಮಾರಾಟ | 70 | 2 | 25000 |
| 35 | ಕೃಷ್ಣಪ್ಪ | ಕೆಂಪಣ್ಣ | ಮುದ್ದನಾಯಕನಹಳ್ಳಿ | ಮುದ್ದನಾಯಕನಹಳ್ಳಿ 34/5 | 1.30 | 200 | 70 | 2 | 98000 |
| 36 | ನಾಗರಾಜು | ಸುಬ್ಬಣ್ಣ | ಮುದ್ದನಾಯಕನಹಳ್ಳಿ | ಮುದ್ದನಾಯಕನಹಳ್ಳಿ 23/8, 23/3 | 0.20 | 100 | 70 | 2 | 49800 |
| 37 | ನಾರಾಯಣಸ್ವಾಮಿ | ಸುಬ್ಬಣ್ಣ | ಮುದ್ದನಾಯಕನಹಳ್ಳಿ | ಮುದ್ದನಾಯಕನಹಳ್ಳಿ 23/1, 23/3, 31/2 | 0.25 | 100 | 70 | 2 | 49800 |
| | | | | | 40.35 | | | | 2639800 |